

ನಿಂಗ ಹೊಟ್ಟೆ ನೋವು ಅಂತ ಡಾಕ್ಟ್ರ ಹತ್ರ ಹೋದ. ಡಾಕ್ಟ್ರು ನಿಂಗಗ ಪ್ರಶ್ನೆ ಕೇಳಾಕ ಹತ್ತಿದ್ರು.

ಡಾಕ್ಟ್ರು: ಏನಪಾ ನಿಂಗ, ಮುಂಜಾನೆ ಹೊಟ್ಟೀಗೆ ಏನ್ತಗಂಡಿ?

ನಿಂಗ: ಉಪ್ಪಿಟ್ರೀ.

ಡಾಕ್ಟ್ರು: ಸರಿ, ನಿಮ್ಮಪ್ಪ ಏನ್ತಿಂದ?

ನಿಂಗ: ಅವ್ರೂ ಉಪ್ಪಿಟ್ರೀ.

ಡಾಕ್ಟ್ರು: ನಿಮ್ಮಜ್ಜ ಏನ್ತಿಂದ?

ನಿಂಗ: ಡಾಕ್ಟ್ರ ಅವ್ರೂ ಉಪ್ಪಿಟ್ರೀ, ಅಲ್ರೀ ನನ್ನ ಹೊಟ್ಟೆ ನೋವಿಗೂ ನಮ್ಮನೆಯವ್ರು ತಿನ್ನೋದಕ್ಕೂ ಏನ್ರೀ ಸಂಬಂಧ?

ಡಾಕ್ಟ್ರು: ಅಲ್ಲೇ ಇರೋದಪಾ ಮಜಕೂರ. ನಾಳೆ ನಿನ್ನ ಆಪರೇಶನ್ ಮಾಡಿಂದ ನೀ ಗೊಟಕ್ ಅಂದ್ರ ಬಿಲ್ ಕೊಡೋ ಲೆಕ್ಕದಾಗ ನಿಮ್ಮನೆಯವ್ರು ಅದಾರಿಲ್ಲೋ ತಿಳ್ಕಾಬೇಕಿತ್ತು.

ನಿಂಗ: ನಂಗೂ ಬಿಗ್ ಬಾಸ್‌ಗೆ ಕರೆ ಬಂದಿತ್ತಲೆ ನಿಂಗಾ.

ಕೆಂಗ: ಹೌದಾ? ಒಳ್ಳೇ ಚಾನ್ಸು ಹೋಗ್ಬೇಕಿತ್ತು.

ನಿಂಗ: ಏನ್ಮಾಡೋದು, ನನ್ನಾಕೆ ಹೋಗೋದು ಬ್ಯಾಡ ಅಂದ್ಲು.

ಕೆಂಗ: ಅರೇ, ನಿನ್ನ ಮ್ಯಾಲೆ ಅಷ್ಟೊಂದು ಪ್ರೀತೀನಾ?

ನಿಂಗ: ಎಲ್ಲೀ ಪ್ರೀತಿ. 'ನೀನು ಬಿಗ್ ಬಾಸ್ಗೆ ಹೋದ್ರೆ ಮನೆಯಲ್ಲಿ ಬಟ್ಟೆ ತೊಳಿಯೋರು, ಅಷ್ಗೆ ಮಾಡೋರು ಯಾರು' ಅಂದ್ಲು.

***

ಲೇ, 'ನನಗೆ ಶುಗರ್ ಐತಿ, ಜಲ್ದಿ ತಿಂಡಿ ಕೊಡ್ಲಿಲ್ಲ ಅಂದ್ರ ನಿನಗೇನ್ಮಾಡ್ತೀನೋ ನನಗೇ ಗೊತ್ತಿಲ್ಲ. ಜಲ್ದಿ ತಾ' ಅಬ್ಬರಿಸಿದ ನಿಂಗ.

ಮಾಡತಿದೀನಿ ತಡೀರಿ ಹೆಂಡತಿಯ ಸಮಜಾಯಿಷಿ.

'ಲೇ, ಸಾಧ್ಯ ಇಲ್ಲ. ನಾನು ಇನ್ನು ತಡ್ಕೊಳ್ಳಲ್ಲ' ನಿಂಗ ಚೀರಿದ.

'ಬೇಕಾದ್ದು ಮಾಡ್ಕೊಳ್ರೀ. ನಾ ಹೆದ್ರಲ್ಲ. ಏನ್ಮಾಡ್ತೀರಿ, ಹೇಳ್ರಿ' ನಿಂಗಿಯೂ ದಬಾಯಿಸಿದಳು.

'ಏನ್ಮಾಡೋದಿದೆ, ಸುಮ್ಮನಿರ್ತೀನಿ' ನಿಂಗ ತಣ್ಣಗೆ ನುಡಿದ.

***

ರೋಜಿ ಅಂಗಡಿಯೊಂದರ ಮುಂದಿಟ್ಟಿದ್ದ ತೂಕ ಅಳೆಯುವ ಯಂತ್ರದಿಂದ ತೂಕ ನೋಡಿಕೊಳ್ಳುತ್ತಿದ್ದಳು. ನಿಂಗನೂ ಅವಳ ಹಿಂದೆ ತೂಕ ನೋಡಿಕೊಳ್ಳಲು ಕಾಯ್ತು ನಿಂತ.

ರೋಜಿ ತೂಕ ನೋಡಿಕೊಂಡಳು, 46 ಕೆ.ಜಿ ಇತ್ತು. ಕೈಲಿದ್ದ ವ್ಯಾನಿಟಿ ಬ್ಯಾಗ, ಮೊಬೈಲ್ ಬದಿಗಿಟ್ಟು ಮತ್ತೆ ತೂಕ ನೋಡಿಕೊಂಡಳು, ಅದು 44 ಕೆ.ಜಿ ಇತ್ತು. ಅನಂತರ ಶೂ ಕಳಚಿ ತೂಕ ನೋಡಿಕೊಂಡಳು, ಅದು 42 ಕೆ.ಜಿ ಇತ್ತು. ಈಗ ದುಪಟ್ಟಾ ತೆಗೆದು ತೂಕ ನೋಡಿಕೊಂಡಳು, ಅದು 41 ಕೆಜಿ ಇತ್ತು. ಅಲ್ಲಿಗೆ ಅವಳ ಬಳಿಯಿದ್ದ ನಾಣ್ಯಗಳೆಲ್ಲ ಮುಗಿದು ಹೋದವು. ಅವಳ ಹಿಂದೆ ನಿಂತಿದ್ದ ನಿಂಗ ನೀವು ತೂಕ ಮಾಡುವುದನ್ನು ನಿಲ್ಲಿಸಬೇಡಿ. ನನ್ನ ಬಳಿ ನಾಣ್ಯಗಳಿವೆ ಎಂದ.

***

ನಿಂಗಾ, ಇವತ್ತು ನೀನು ಸ್ಕೂಲಿಗೆ ಬರ್ಬೇಕಿತ್ತು. ತುಂಬ ಮಜಾ ಇತ್ತು. ಖುಷಿಯಾಗಿದ್ವಿ ಕೆಂಗ ಉಸುರಿದ.

ಅರೇ, ಅದೇನು ಖುಷಿಯಾಗಿತ್ತು? ನಿಂಗ ಕೇಳಿದ.

ಇವತ್ತು ನಮ್ಮ ಕ್ಲಾಸ್ ಟೀಚರು ರಜಾ ಹಾಕಿದ್ರು ಗೊತ್ತಾ? ಎಂದ ಕೆಂಗ.

***

ನಿಂಗ ನಿತ್ಗಂಡು ಊಟ ಮಾಡ್ತಿದ್ದ. ಮಟ ಮಟ ಮಧ್ಯಾಹ್ನದಾಗ ಅವ್ರ ಮನೀಗೆ ಹೋದ ಕೆಂಗ ಯಾಕ್ಲೇ ನಿಂಗ, ನಿತ್ಗಂಡು ಉಣ್ಣಾಕ ಹತ್ತೀಯಲಲೇ? ಅಂತ ಕೇಳ್ದ.

ಏನ್ಮಾಡೋದಪಾ ಎಲ್ಲರೂ ಓಣ್ಯಾಗ ನಿಂಗ ಹೇಣ್ತಿ ದುಡ್ಡದ್ದ ಕುತ್ಗಂಡು ಉಣ್ಣಾಕ ಹತ್ಯಾನ ಅಂತಾರ. ಅದ್ಕ ನಿತ್ಗಂಡು ಉಣ್ಣಾಕ ಹತ್ತೇನಿ ನಿಂಗನ ಉತ್ರಾ ಕೇಳಿ ಕೆಂಗ ಮಂಗನಂತಾದ.

***

ಸರ್ಕಲ್ಲಿನಲ್ಲೊಂದುಜಗ್ಗಭರಾಟೆಯಿಂದನಡ್ದಿತ್ತು. ತುಂಬ ಜನಜಂಗುಳಿ. ದೂರದಿಂದ ಪೊಲೀಸರು ಬರುವುದು ಕಾಣಿಸಿತು. ಎಲ್ಲರೂ ಎದ್ದು ನಿಂತರು. ಪೊಲೀಸರು ಬಂದವರೇ ದಬಾಯ್ಸಿದರು. ಕೂತ್ಗಳ್ಳಿ, ಮುಂದಿರೋರು ಕೂತ್ಗಳ್ಳಿ. ಹೀಂಗ ನೀವು ನಿತ್ಗಂಡ್ರೆ ಹಿಂದಿರೋರ್ಗೆ ಜಗ್ಗಾ ಕಾಣೋದಾದ್ರೂ ಹೆಂಗೆ? ಮುಂದಿರೋರು ಕುತ್ಗಂಡು ನೋಡಿ.

ಎಲ್ಲರೂ ಕುಂತು ಜಗ್ಗಾನ ಆಸ್ವಾದಿಸತೊಡಗಿದರು.

***

ಮಗ: ಅಮ್ಮಾ, ಅಮ್ಮಾ, ನಾನಿವತ್ತು ಸ್ಕೂಲಿಗೆ ಹೋಗಲ್ಲ.

ಅಮ್ಮ: ಯಾಕೋ ನೀನಿವತ್ತು ಹೋಗಲೇಬೇಕು.

ಮಗ: ನೀ ಏನಂದ್ರೂ ನಾ ಹೋಗಲ್ಲ.

ಅಮ್ಮ: ಹಾಗಾದ್ರೆ ನೀನ್ಯಾಕೆ ಸ್ಕೂಲ್ಗೆ ಹೋಗಲ್ಲ ಅನ್ನೋದಕ್ಕೆ ಎರಡು ಕಾರಣ ಕೊಡು, ಯಾಕೆ ಸ್ಕೂಲ್ಗೆ ಹೋಗಬೇಕು ಅನ್ನೋದಕ್ಕೆ ನಾನು ಮೂರು ಕಾರಣ ಕೊಡುವೆ.

ಮಗ: ಆಯ್ತು ಕೇಳು, ನನ್ನನ್ನು ಎಲ್ಲ ವಿದ್ಯಾರ್ಥಿಗಳೂ ಹೀಯಾಳಿಸ್ತಾರೆ; ಶಿಕ್ಷಕರು ಸೇರಲ್ಲ. ಮತ್ಯಾಕೆ ಶಾಲೆಗೆ ಹೋಗಲಿ.

ಅಮ್ಮ: ನೋಡು ನಿನ್ನ ಕಾಳಜಿ ಮಾಡಲು ನನಗೆ ಸಮಯವಿಲ್ಲ. ಮೇಲಾಗಿ ನಿನಗೆ ಐವತ್ತು ವರ್ಷ ವಯಸ್ಸು. ಇದೂ ಅಲ್ಲದೇ ನೀನು ಆ ಶಾಲೆಯ ಪ್ರಿನ್ಸಿಪಾಲ್ ಗೊತ್ತಾಯ್ತಾ. ತಕ್ಷಣ ಶಾಲೆಗೆ ಹೋಗು.

***

ತಿಮ್ಮ: ನಮ್ಮ ಕನ್ನಡ ಚಿತ್ರ ನಟಿಯರು ಪದೇ ಪದೇ ಇಂಗ್ಲೀಷನಲ್ಲೇ ಯಾಕೆ ಮಾತಾಡ್ತಾರೆ ಅಂತ ನನಗೆ ಇವತ್ತು ಗೊತ್ತಾತು.

ಗುಂಡ: ಹೌದಾ, ಯಾಕೆ?

ತಿಮ್ಮ: ಅವರಿಗೆ ಬ್ರಿಟನ್ ವೈರಸ್ ಸೋಂಕು!

***

ತಿಮ್ಮ: ನಾನು ಶೀಲಾ ಜೊತೆ ಜಗಳವಾಡಿದ್ದು ತಪ್ಪಾಯ್ತೋ, ಇಲ್ಲಾ ರಂಗನಿಗೆ ಅವಳ ಫೋನ್ ನಂಬರ್ ಕೊಟ್ಟಿದ್ದು ತಪ್ಪಾಯ್ತೋ ತಿಳೀತಿಲ್ಲ ಕಣೋ.

ಗುಂಡ: ಶೀಲಾ ನಿನ್ನ ಲವರ್ ಅಲ್ವೇನೋ ಏನಾಯ್ತೀಗ?

ತಿಮ್ಮ: ರಂಗನಿಗೆ ನಮ್ಮ ಜಗಳ ಸರಿಮಾಡು ಅಂತ ಶೀಲಾ ಫೋನ್ ನಂಬರ್ ಕೊಟ್ಟಿದ್ದೆ. ನೋಡೀಗ ನಾಳೆ ಶೀಲಾಳ ಜೊತೆ ರಂಗನ ಮದುವೆ.

***

ಶಿಕ್ಷಕರು: ನಿಮ್ಮಂಥ ಮೂರ್ಖರಿಗೆ ಪಾಠ ಮಾಡ್ಲಿಕ್ಕೆ ಬಂದೆನಲ್ಲ ನಾನೊಬ್ಬ ಮಹಾಮೂರ್ಖ.

ತಿಮ್ಮ: ತಡವಾಗಿಯಾದರೂ ನಿಮಗೆ ಗೊತ್ತಾಯ್ತಲ್ಲ ಸರ್.

***

ತಿಮ್ಮ: ನನ್ಹೆಂಡ್ತಿ ತುಂಬ ಸೂಕ್ಷ್ಮ ಕಣೋ.

ಗುಂಡ: ಅದ್ಹೆಂಗೆ ಹೇಳ್ತೀಯಾ?

ತಿಮ್ಮ: ಮೊನ್ನೆ ಅಡಿಗೆ ಮನೆ ಬಾಗಿಲಿಗೆ ಪರದೆ ಹಾಕಿದಾಳೆ.

ಗುಂಡ: ಹಾಕಿದ್ರೇನಾತು?

ತಿಮ್ಮ: ನಾನು ಅಡಿಗೆ ಮಾಡೋದು ಪಕ್ಕದ ಮನೆಯವ್ರಿಗೆ ಕಾಣಬಾರದೂಂತ!

(ಸಂಗ್ರಹ) ಪ್ರಕಾಶ ಎಸ್.ಮನ್ನಂಗಿ,
ಮೋಟೆಬೆನ್ನೂರು.